# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 190 | Pages. 2 | Date: 08-07-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 190 – ಪುಟಗಳು : 2 | 08-07-2026 ಬುಧವಾರ | Ph: 8762954248 | ದರ : ₹1


# ಮಳೆ: ಮಲೆನಾಡು ಭಾಗದಲ್ಲಿ ಹೆಚ್ಚಿದ ಆತಂಕ

## ಶಿರಾಡಿ ಘಾಟ್‌ನಲ್ಲಿ ಸಂಚಾರ ಸಂಕಷ್ಟ | ಅಪಾಯಕಾರಿ ಸ್ಥಳದಲ್ಲಿ ಪ್ರವೇಶ ನಿಷೇಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾದ್ಯಂತ ವರುಣನ ಅಬ್ಬರ ಮುಂದುವರಿದ್ದು ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ.

ಮಲೆನಾಡು ಭಾಗದ ಸಕಲೇಶಪುರ, ಬೇಲೂರು ಮತ್ತು ಆಲೂರು ತಾಲೂಕುಗಳಲ್ಲಿ ಮಳೆ ಜೋರಾದ ಹಿನ್ನೆಲೆಯಲ್ಲಿ ಮಂಗಳವಾರ ಅಂಗನವಾಡಿ ಮತ್ತು ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಬೇಲೂರು ತಾಲ್ಲೂಕಿನ, ಅರೇಹಳ್ಳಿ ಬಿಕ್ಕೋಡು, ಚೀಕನಹಳ್ಳಿ ಹೋಬಳಿಗಳು, ಕಸಬಾ ಎ, ಕಸಬಾ ಬಿ ವಲಯದ ಎಲ್ಲಾ ಅಂಗನವಾಡಿ, ಪ್ರಾಥಮಿಕ, ಹಾಗೂ ಪ್ರೌಢಶಾಲೆಗಳಿಗೆ ಇಂದು ರಜೆ ನೀಡಲಾಗಿತ್ತು.

ಈ ಭಾಗಗಳಲ್ಲಿ ಹೆಚ್ಚು ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ಹಾಗೂ ಮುಂಜಾಗ್ರತಾ ಕ್ರಮವಾಗಿ ರಜೆ ಘೋಷಿಸಿ ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಆದೇಶ ಹೊರಡಿದ್ದಾರೆ.

ಇದೇ ರೀತಿ ಆಲೂರು ತಾಲೂಕಿನ ಅಂಗನವಾಡಿ ಮತ್ತು ಶಾಲಾ ಕಾಲೇಜು ಗಳಿಗೂ ರಜೆ ಘೋಷಣೆ ಮಾಡಲಾಗಿದೆ.

### ಒಳ ಹರಿವು ಹೆಚ್ಚಳ

ಮಲೆನಾಡು ಹಾಗೂ ಮೂಡಿಗೆರೆ ಭಾಗಗಳಲ್ಲಿ ಉತ್ತಮ ಮಳೆ ಆಗುತ್ತಿರುವುದರಿಂದ ಜಿಲ್ಲೆಯ ಜೀವನದಿ ಹೇಮಾವತಿಗೆ ಒಳ ಹರಿವಿನ ಪ್ರಮಾಣದಲ್ಲಿ ಏರಿಕೆ ಆಗಿದೆ.

ಸೋಮವಾರ 6294 ಕ್ಯುಸೆಕ್ ಇದ್ದ ಒಳ ಹರಿವು ಮಂಗಳವಾರ 8901 ಕ್ಯುಸೆಕ್ ಗೆ ಹೆಚ್ಚಳ ಆಗಿದೆ. ಜು.1 ರಿಂದ ಇಲ್ಲಿಯವರೆಗೆ 5 ಅಡಿಗೂ ಹೆಚ್ಚು ನೀರು ಜಲಾಶಯದಲ್ಲಿ ಸಂಗ್ರಹವಾಗಿದೆ.



ಒಟ್ಟು 37.103 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಹಾಲಿ 17.379 ಟಿಎಂಸಿ ನೀರಿದೆ.

ಜಲಾಶಯದ ಗರಿಷ್ಠ ನೀರಿನ ಮಟ್ಟ 2922.00 ಅಡಿಗಳಾಗಿದ್ದು, ಸದ್ಯ 2895.91 ಅಡಿ ನೀರಿದೆ. ಜಲಾಶಯ ಭರ್ತಿಗೆ ಇನ್ನೂ 26.9 ಅಡಿ ನೀರು ಹರಿದು ಬರಬೇಕಿದೆ.

### ಅಪಾಯಕಾರಿ ಸ್ಥಳಗಳಲ್ಲಿ ಪ್ರವೇಶ ನಿಷೇಧ

ನಿರಂತರ ಮಳೆಯಿಂದ ಸಕಲೇಶಪುರ ತಾಲ್ಲೂಕಿನ ಹಲವು ಪ್ರದೇಶಗಳಲ್ಲಿ ಭೂಕುಸಿತ, ರಸ್ತೆ ಕುಸಿತ, ಮರಗಳ ಉರುಳುವಿಕೆ ಸೇರಿ ಅನಾಹುತಗಳು ಸಂಭವಿಸುವ ಸಾಧ್ಯತೆಯಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅಪಾಯಕಾರಿ ಸ್ಥಳಗಳಲ್ಲಿ ಸಾರ್ವಜನಿಕರ ಪ್ರವೇಶ ನಿಷೇಧಿಸಿ ತಹಶೀಲ್ದಾರ್ ಸುಪ್ರಿತಾ ಆದೇಶಿಸಿದ್ದಾರೆ.

ತಾಲ್ಲೂಕು ವ್ಯಾಪ್ತಿಯ ಎಲ್ಲಾ ಜಲಪಾತ, ನದಿ, ಹಳ್ಳ, ಜಲಾಶಯ, ಗುಡ್ಡ ಪ್ರದೇಶ, ಭೂಕುಸಿತ ಸಂಭವಿಸುವ ಪ್ರದೇಶಗಳಲ್ಲಿ ಮುಂದಿನ ಆದೇಶದ ವರೆಗೆ ಸಾರ್ವಜನಿಕ ಪ್ರವೇಶ ನಿರ್ಬಂಧಿಸಿದೆ. ಈ ಆದೇಶವನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆ 2005, ಭಾರತೀಯ ನಾಗರಿಕ ಸಂರಕ್ಷಣಾ ಸಂಹಿತೆ 2023ರ ಅಡಿಯಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು.

ಹೋಂ ಸ್ಟೇ ಮತ್ತು ರೆಸಾರ್ಟ್ ಮಾಲೀಕರು ಪ್ರವಾಸಿಗರಿಗೆ ಟ್ರಾಕಿಂಗ್ ವ್ಯವಸ್ಥೆ ಕಲ್ಪಿಸಿ ಅನಾಹುತ ಸಂಭವಿಸಿದರೆ ಮಾಲೀಕರೇ ನೇರ ಹೊಣೆಗಾರರಾಗುತ್ತೀರಿ ಎಂದು ಎಚ್ಚರಿಸಿದ್ದಾರೆ.

### ಶಿರಾಡಿ ಘಾಟ್‌ನಲ್ಲಿ ಹೆಚ್ಚಿದ ಸಂಕಷ್ಟ

ಸಕಲೇಶಪುರ ತಾಲೂಕಿನಾದ್ಯಂತ ನಾಲ್ಕು ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಧಾರಾಕಾರ ಮಳೆಯ ಪರಿಣಾಮ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಸರಣಿ ಅವಾಂತರಗಳು ಸಂಭವಿಸಿದ್ದು, ವಾಹನ ಸವಾರರು ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ.

ಕೆಂಪುಹಳ್ಳ ಸಮೀಪ ಡಾಂಬಾರ್ ಸಾಗಿಸುತ್ತಿದ್ದ ಟ್ಯಾಂಕರ್ ಪಲ್ಟಿಯಾಗಿ ಡಾಂಬಾರ್ ರಸ್ತೆಗೆ ಸೋರಿಕೆಯಾಗಿದ್ದರೆ ಅದೇ ಮಾರ್ಗದಲ್ಲಿ ಮತ್ತೊಂದು ಕಂಟೈನರ್ ನಿಯಂತ್ರಣ ತಪ್ಪಿ ಹಳ್ಳಕ್ಕೆ ವಾಲಿದೆ.

ಕೆಂಪುಹಳ್ಳ ಸಮೀಪ ಭಾರೀ ಮಳೆಯ ನಡುವೆಯೇ ರಸ್ತೆ ಸ್ಪಷ್ಟವಾಗಿ ಕಾಣದ ಕಾರಣ ಡಾಂಬಾರ್ ತುಂಬಿದ್ದ ಟ್ಯಾಂಕರ್ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ ಎನ್ನಲಾಗಿದೆ.

ಅಪಘಾತದ ಪರಿಣಾಮ ಟ್ಯಾಂಕರ್‌ನಲ್ಲಿದ್ದ ಡಾಂಬಾರ್ ರಸ್ತೆಗೆ ಹರಿದು ಬಂದಿದ್ದು ಮಳೆ ನೀರಿನೊಂದಿಗೆ ಬೆರೆತು ಹೊಗೆಯಾಡುತ್ತಿರುವ ದೃಶ್ಯ ಕಂಡುಬಂದಿತು. ಡಾಂಬಾರ್ ರಸ್ತೆಯ ಮೇಲೆ ಹರಡಿರುವ ಮಾಹಿತಿ ತಿಳಿಯದೆ ಸಂಚರಿಸಿದ ಕಾರು ಹಾಗೂ ಬೈಕ್ ಸವಾರರು ಪರದಾಡುವಂತಾಯಿತು. ಹಲವು ವಾಹನಗಳ ಟೈರ್‌ಗಳಿಗೆ ಡಾಂಬಾರ್ ಅಂಟಿಕೊಂಡ ಪರಿಣಾಮ ವಾಹನಗಳನ್ನು ಚಲಾಯಿಸಲು ತೊಂದರೆಯಾಯಿತು. ಅಪಘಾತದಲ್ಲಿ ಗಾಯಗೊಂಡ ಟ್ಯಾಂಕರ್ ಚಾಲಕ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದು, ಟ್ಯಾಂಕರ್ ಮಾಲೀಕರು, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ನಿರಂತರ ಮಳೆಯ ಕಾರಣ ಅಪಘಾತಕ್ಕೀಡಾದ ಟ್ಯಾಂಕರ್ ತೆರವು ಕಾರ್ಯಕ್ಕೂ ಅಡಚಣೆ ಉಂಟಾಗಿದ್ದು ಟ್ಯಾಂಕರ್‌ನಿಂದ ಇನ್ನೂ ಡಾಂಬಾರ್ ರಸ್ತೆಗೆ ಹರಿದು ಬರುತ್ತಿದೆ.

ಇದೇ ವೇಳೆ ಟ್ಯಾಂಕರ್ ಅಪಘಾತ ಸಂಭವಿಸಿದ ಸ್ಥಳದಿಂದ ಸ್ವಲ್ಪ ದೂರದಲ್ಲೇ ಮತ್ತೊಂದು ಕಂಟೇನರ್ ಕೂಡ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಹಳ್ಳಕ್ಕೆ ವಾಲಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಇನ್ನೊಂದೆಡೆ ಧಾರಾಕಾರ ಮಳೆ ಹಾಗೂ ಬಿರುಗಾಳಿಯಿಂದ ರಾಷ್ಟ್ರೀಯ ಹೆದ್ದಾರಿಯ ಹಲವೆಡೆ ಮರಗಳು ರಸ್ತೆಗೆ ಉರುಳಿ ಬಿದ್ದಿದ್ದು, ವಾಹನ ಸಂಚಾರ ನಿಧಾನಗತಿಯಲ್ಲಿ ಸಾಗುತ್ತಿದೆ. ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದರ ಹಿಂದೆ ಒಂದರಂತೆ ಅನಾಹುತಗಳು ಸಂಭವಿಸುತ್ತಿದ್ದು, ಎಚ್ಚರಿಕೆಯಿಂದ ಸಂಚರಿಸುವಂತೆ ಅಧಿಕಾರಿಗಳು ವಾಹನ ಸವಾರರಿಗೆ ಮನವಿ ಮಾಡಿದ್ದಾರೆ.

## ಸಾರ್ವಜನಿಕರ ಸಹಕಾರವಿಲ್ಲದಿದ್ದರೆ ಯೋಜನೆ ನಿಷ್ಪ್ರಯೋಜಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸ್ವಚ್ಛ ಭಾರತ್ ಯೋಜನೆಯಡಿ ಕೇಂದ್ರ ಸರ್ಕಾರವು ಹಲವಾರು ಯೋಜನೆಗಳನ್ನು ರೂಪಿಸುತ್ತಿದ್ದು, ಸಾರ್ವಜನಿಕರ ಸಹಕಾರವಿಲ್ಲದಿದ್ದರೆ ಯಾವ ಯೋಜನೆಯೂ ಫಲಪ್ರದವಾಗುವುದಿಲ್ಲ ಎಂದು ಶಾಸಕ ಸಿ.ಎನ್ .ಬಾಲಕೃಷ್ಣ ಅಭಿಪ್ರಾಯಪಟ್ಟರು.

ತಾಲೂಕಿನ ನಲ್ಲೂರು ಬಳಿಯ ಪುರಸಭೆಯ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ 1.24 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗೆ ಮಂಗಳವಾರ ಚಾಲನೆ ನೀಡಿ ಮಾತನಾಡಿದ ಅವರು, 78.14 ಕೋಟಿ ರೂ. ವೆಚ್ಚದಲ್ಲಿ ಎಂಆರ್‌ಎಫ್ ಶೆಡ್ ನಿರ್ಮಾಣಗೊಂಡಿದ್ದು 22 ಲಕ್ಷ ರೂ. ವೆಚ್ಚದಲ್ಲಿ ಯಂತ್ರೋಪಕರಣ ಅಳವಡಿಸಲಾಗಿದೆ ಎಂದರು.

24 ಲಕ್ಷ ರೂ. ವೆಚ್ಚದಲ್ಲಿ ಬೀದಿ ನಾಯಿಗಳ ಆಶ್ರಯ ತಾಣ ನಿರ್ಮಾಣ ಮಾಡಲಾಗುತ್ತಿದೆ. ಅದಕ್ಕೆ 15ನೇ ಹಣಕಾಸು ಯೋಜನೆಯಡಿ 3.42 ಲಕ್ಷ ರೂ. ಹಾಗು ಪುರಸಭೆ ಅನುದಾನದಲ್ಲಿ 21 ಲಕ್ಷ ರೂ. ನೀಡಲಾಗುತ್ತಿದೆ ಎಂದರು.

ಪ್ರತಿವರ್ಷ, ತ್ಯಾಜ್ಯ ನಿರ್ವಹಣಾ ಘಟಕದ ಉನ್ನತೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಈ ಆವರಣದಲ್ಲಿ ಈಗಾಗಲೇ 200 ವಿವಿಧ ಜಾತಿಯ ಗಿಡ ನೆಡಲಾಗಿದೆ. ಅದರಿಂದ ಪರಿಸರಕ್ಕೂ ಕೊಡುಗೆ ನೀಡಿದಂತಾಗುತ್ತದೆ. ಪಟ್ಟಣದಲ್ಲಿ ನಿತ್ಯ 15 ಟನ್ ಕಸ ಸಂಗ್ರಹವಾಗುತ್ತಿದೆ. ಈಗಾಗಲೇ 75 ಟನ್ ಗೊಬ್ಬರ ಮಾರಾಟ ಮಾಡಲಾಗಿದೆ ಎಂದರು.

ಸದ್ಯ ಚನ್ನರಾಯಪಟ್ಟಣ ಪುರಸಭೆಯಲ್ಲಿ ಸಿಬ್ಬಂದಿ ಕೊರತೆ ಹೆಚ್ಚಿದೆ. ಪರಿಸರ ಇಂಜಿನಿಯರ್, ಆರೋಗ್ಯಾಧಿಕಾರಿ ಇಲ್ಲ. ಬೇರೆ ಇಲಾಖೆಗಳಿಂದ ಸಿಬ್ಬಂದಿಯನ್ನು ನಿಯೋಜನೆ ಮಾಡುವ ಮೂಲಕ ಸ್ವಚ್ಛತಾ ಕಾರ್ಯಕ್ಕೆ ಸಹಕರಿಸಬೇಕೆಂದು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು.

## ಕಳ್ಳತನಕ್ಕೆ ಬಂದವನನ್ನು ಪೊಲೀಸರಿಗೆ ಒಪ್ಪಿಸಿದ ಜನರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಮನೆಗಳ್ಳತನ ಮಾಡಲು ಯತ್ನಿಸಿದ ಕಳ್ಳನನ್ನು ಗ್ರಾಮಸ್ಥರು ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ತಾಲ್ಲೂಕಿನ ಮೆಳ್ಳಹಳ್ಳಿ ಗ್ರಾಮದಲ್ಲಿ ನಡೆದಿದೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬಲ್ಲವಳ್ಳಿ ಗ್ರಾಮದ ಪೃಥ್ವಿ ರಾಜ್ ಸಿಕ್ಕಿಬಿದ್ದಿರುವ ಕಳ್ಳ. ಮೆಳ್ಳಹಳ್ಳಿ ಗ್ರಾಮದ ಮೂಡಲ ಬೋರೆ ಪ್ರದೇಶದ ಆನಂದ್ ಎಂಬುವವರ ತೋಟದ ಮನೆಯಲ್ಲಿ ಸೋಮವಾರ ಬೆಳಿಗ್ಗೆ 10 ಗಂಟೆ ವೇಳೆಯಲ್ಲಿ ಕಳ್ಳತನಕ್ಕೆ ಯತ್ನಿಸಿದ್ದ. ಮನೆಯಲ್ಲಿ ಆನಂದ್ ಅವರ ತಾಯಿ ಒಬ್ಬರೇ ಇದ್ದು ಮನೆಗೆ ಬೀಗ ಹಾಕಿ ಜಾನುವಾರುಗಳನ್ನು ಜಮೀನಿನಲ್ಲಿ ಕಟ್ಟಿ ಬರಲು ತೆರಳಿದ್ದರು. ಮನೆ ಮುಂದಿನ ಚಪ್ಪಲಿ ಕೆಳಗೆ ಇಟ್ಟಿದ್ದ ಕೀ ನೆರವಿನಿಂದ ಒಳಪ್ರವೇಶಿಸಿದ್ದ ಪೃಥ್ವಿರಾಜ್ ಕಳ್ಳತನದ ಪ್ರಯತ್ನದಲ್ಲಿದ್ದ. ಅದೇ ವೇಳೆಗೆ ಆನಂದ್ ಅವರ ತಾಯಿ ಬಂದಾಗ ಮನೆ ಮುಂದೆ ಬೈಕ್ ನಿಂತಿರುವುದನ್ನು ಕಂಡು ಒಳಗೆ ಹೋಗಿದ್ದಾರೆ. ಅಷ್ಟರಲ್ಲಿ ಪಕ್ಕದ ಜಮೀನಿನ ಶಿವರಾಜು ಎಂಬುವವರು ಕೆಲಸದ ಸಲುವಾಗಿ ಏಣಿ ಕೇಳಲೆಂದು ಬಂದಿದ್ದಾರೆ. ಮನೆಯ ಒಳಗೆ ಯಾರೋ ಬಿರುವಿನ ಬಾಗಿಲು ತೆಗೆಯುವುದು ಹಾಗು ವಸ್ತುಗಳನ್ನು ಬಿಸಾಡುತ್ತಿರುವ ಶಬ್ದ ಕೇಳಿದೆ.



ಕಳ್ಳ ಮನೆಯೊಳಗೆ ನುಗ್ಗಿರುವುದನ್ನು ಅರಿತ ಅವರು ಜೋರಾಗಿ ಕೂಗಿದಾಗ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದವರು ಓಡೋಡಿ ಬಂದಿದ್ದಾರೆ.

ಐದಾರು ಮಂದಿ ಯುವಕರು ದೊಣ್ಣೆ ಹಿಡಿದು ಬೆಡ್ ರೂಮ್‌ಗೆ ಹೋದಾಗ ಖದೀಮ ಮೂಲೆಯಲ್ಲಿ ನಿಂತಿರುವುದನ್ನು ನೋಡಿ, ಆತನ ಕೈಗಳನ್ನು ಹಿಂಬದಿಯಿಂದ ಕಟ್ಟಿ ಹೊರಗೆ ಕರೆ ತಂದಿದ್ದಾರೆ.

ಆತನ ವಿಳಾಸ ವಿಚಾರಿಸಿದಾಗ ನಾಗಮಂಗಲ ತಾಲ್ಲೂಕು ಬಲ್ಲವಳ್ಳಿ ಗ್ರಾಮದವನು ಎಂದು ತಿಳಿಸಿದ್ದಾನೆ. ಪೊಲೀಸರ ವಿಚಾರಣೆಯಲ್ಲಿ ಮತ್ತಷ್ಟು ಮಾಹಿತಿ ನೀಡಿರುವ ಆತ, ಕದಬಹಳ್ಳಿಯಲ್ಲಿ ಮೊಬೈಲ್ ಶಾಪ್ ಹೊಂದಿದ್ದು ಯಾವುದೇ ಸಾಲಬಾಧೆ ಇಲ್ಲ. ಆದರೂ ಕಳ್ಳತನ ರೂಢಿಸಿಕೊಂಡಿದ್ದಾನೆ. ಬೆಂಗಳೂರಿನ ವಿವಿಧೆಡೆ ಕಳ್ಳತನದಲ್ಲಿ ಭಾಗಿಯಾಗಿದ್ದು ಈತನ ಮೇಲೆ ಪ್ರಕರಣ ದಾಖಲಾಗಿರುವುದು ತಿಳಿದುಬಂದಿದೆ.

## ಸರ್ಕಾರಿ ಶಾಲೆಗಳ ಫಲಿತಾಂಶ ಶ್ಲಾಘನೀಯ: ಶಾಸಕ ಬಾಲಕೃಷ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸರ್ಕಾರಿ ಶಾಲೆಗಳು ಪ್ರತಿವರ್ಷ ಉತ್ತಮ ಫಲಿತಾಂಶ ದಾಖಲಿಸುತ್ತಿದ್ದು, ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ತಿಳಿಸಿದರು.




ಪಟ್ಟಣದ ಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ 2026-27ನೇ ಸಾಲಿನ ಪ್ರಥಮ ಪೋಷಕರ ಸಭೆ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ ತಂತ್ರಜ್ಞಾನ ಆಧಾರಿತ ಕಲಿಕೆಗೆ ಉತ್ತೇಜನ ನೀಡಲಾಗುತ್ತಿದೆ. ಸುಸಜ್ಜಿತ ಪ್ರಯೋಗಾಲಯ ನಿರ್ಮಾಣ ಮಾಡಿ ವಿಜ್ಞಾನ ಮತ್ತು ಕಂಪ್ಯೂಟರ್ ಶಿಕ್ಷಣಕ್ಕೆ ಆದ್ಯತೆ ನೀಡಿ, ಉತ್ತಮ ವಾತಾವರಣದಲ್ಲಿ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಮಾಡಲಾಗಿದೆ. ತರಬೇತಿ ಹೊಂದಿದ ಶಿಕ್ಷಕರಿಂದ ನಿರಂತರ ಆಧುನಿಕ ತರಬೇತಿ ಸೇರಿ ಮೂಲ ಸೌಕರ್ಯಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು. ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲ್ಲೂಕು ಹಾಸನ ಜಿಲ್ಲೆಗೆ ದ್ವಿತೀಯ ಸ್ಥಾನ ಗಳಿಸಿರುವುದು ಹೆಮ್ಮೆಯ ವಿಷಯ. ತಾಲ್ಲೂಕಿನ ಶೈಕ್ಷಣಿಕ ಸಾಧನೆಗೆ ಇದು ಹೆಮ್ಮೆಯ ವಿಷಯ ಎಂದರು.

ಸರ್ಕಾರಿ ಶಾಲೆಗಳು ಉತ್ತಮವಾಗಿ ಬೆಳೆಯಬೇಕಾದರೆ ಪೋಷಕರು ಮತ್ತು ಶಾಲಾ ಶಿಕ್ಷಕರು ಸಮಾನವಾಗಿ ಸ್ಪಂದಿಸಿದಾಗ ಮಾತ್ರ ಉಳಿಯಲು ಸಾಧ್ಯವಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ಸಾಮಾಜಿಕ ಮೌಲ್ಯಗಳನ್ನು ಕಲಿಯಲು ಸಹಕಾರಿಯಾಗುತ್ತದೆ. ಶಾಲೆಯಲ್ಲಿ ನಡೆಯುವ ಪಾಠದ ಜೊತೆಗೆ ಮನೆಯಲ್ಲಿಯೂ ಸಹ ಪೋಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ಹರಿಸಿದಾಗ ಖಾಸಗಿ ಶಾಲೆಗಿಂತ ಕಡಿಮೆ ಇಲ್ಲ ಎಂಬಂತೆ ಸರಿಸಮಾನವಾಗಿ ಕಲಿಕೆಯಲ್ಲಿ ಮುಂದುವರೆದು ಸಮಾಜದಲ್ಲಿ ನಾಗರಿಕರಾಗಲು ಸಹಕಾರಿಯಾಗುತ್ತದೆ. ಮಕ್ಕಳ ಶೈಕ್ಷಣಿಕ ಬೆಳವಣಿಗೆಯಲ್ಲಿ ಪೋಷಕರ ಸಭೆ ಅವಶ್ಯಕ. ಇಂತಹ ಸಭೆಗಳಿಗೆ ವಿಶೇಷವಾಗಿ ಪೋಷಕರು ತಪ್ಪದೇ ಹಾಜರಾಗಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್. ಹೆಚ್.ಸತೀಶ್, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಕೆ.ಎನ್. ಅನಿಲ್, ಪೇಟೆ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ನೇತ್ರಾವತಿ, ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ದೇವರಾಜೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ವಳಗೆರೆಹಳ್ಳಿ ಮಂಜುನಾಥ್, ಶಾಲಾ ಶಿಕ್ಷಕ ವೃಂದ ಸೇರಿ ಮತ್ತಿತರರಿದ್ದರು.

## ಹಾಸನ ಬೇಕರಿ ಅಸೋಷಿಯೇಷನ್ ವಿಲೀನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಕರಿ ಉದ್ಯಮ ಬಲವರ್ಧನೆ ಹಾಗೂ ಬೆಳವಣಿಗೆ ಉದ್ದೇಶದಿಂದ ಹಾಸನ ಬೇಕರಿ ಸಂಘ, ಕರ್ನಾಟಕ ಬೇಕರಿ ಮತ್ತು ಸ್ವೀಟ್ ಅಸೋಸಿಯೇಷನ್‌ಗೆ ವಿಲೀನವಾಗಿದೆ ಎಂದು ಅಸೋಸಿಯೇಷನ್ ರಾಜ್ಯ ಸಂಚಾಲಕ ಕೇಶವ ಅಯ್ಯಂಗಾರ್ ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಕರ್ನಾಟಕ ಬೇಕರಿ ಮತ್ತು ಸ್ವೀಟ್ಸ್ ಅಸೋಸಿಯೇಷನ್, ಹಾಸನ ಬೇಕರಿ ಓನರ್ಸ್ ಅಸೋಸಿಯೇಷನ್ ನಡುವಿನ ತಿಳುವಳಿಕೆ ಒಪ್ಪಂದ (ಎಂಒಯು) ಆಗಿರುವ ಹಿನ್ನೆಲೆಯಲ್ಲಿ ಹಾಸನ ಬೇಕರಿ ಓನರ್ಸ್ ಅಸೋಸಿಯೇಷನ್ ರಾಜ್ಯ ಸಂಘಕ್ಕೆ ಅಧಿಕೃತವಾಗಿ ವಿಲೀನಗೊಂಡಿದೆ ಎಂದು ಹೇಳಿದರು.

ರಾಜ್ಯದ ಬೇಕರಿ, ಸ್ವೀಟ್ಸ್ ಮತ್ತು ಕೆಫೆ ಉದ್ಯಮದ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಬೇಕರಿ ಮತ್ತು ಸ್ವೀಟ್ಸ್ ಅಸೋಸಿಯೇಷನ್‌ಗೆ ಹಾಸನ ಸಂಘದ ಸದಸ್ಯತ್ವ ಸೇರ್ಪಡೆಯಾಗಿರುವುದರಿಂದ ಸಂಘದ ಒಟ್ಟು ಸದಸ್ಯರ ಸಂಖ್ಯೆ 2,000 ದಾಟಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯ ಸುಮಾರು 100 ಬೇಕರಿ, ಸ್ವೀಟ್ಸ್ ಹಾಗೂ ಕೆಫೆ ಉದ್ಯಮಿಗಳಿಗೆ ಆಹಾರ ಸುರಕ್ಷತೆ (ಫುಡ್ ಸೇಫ್ಟಿ) ಕುರಿತ ವಿಶೇಷ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಗ್ರಾಹಕರಿಗೆ ಗುಣಮಟ್ಟದ ಹಾಗೂ ಸುರಕ್ಷಿತ ಆಹಾರ ಉತ್ಪನ್ನಗಳನ್ನು ಒದಗಿಸುವ ಉದ್ದೇಶದಿಂದ ಈ ತರಬೇತಿ ಹಮ್ಮಿಕೊಳ್ಳಲಾಗಿದೆ. ಅದಕ್ಕೆ ಅಧಿಕೃತ ಪ್ರಮಾಣ ಪತ್ರವನ್ನು ನೀಡಲಾಗುವುದೆಂದರು.

ಕರ್ನಾಟಕ ಬೇಕರಿ ಮತ್ತು ಸ್ವೀಟ್ಸ್ ಅಸೋಸಿಯೇಷನ್ ಎಲ್ಲಾ ಜಿಲ್ಲೆಗಳಲ್ಲೂ ಸಂಘಟನೆ ವಿಸ್ತರಣೆ ಹಾಗೂ ವಿಲೀನ ಕಾರ್ಯಕ್ರಮಗಳನ್ನು ಮುಂದುವರಿಸುತ್ತಿದ್ದು,

ಆಸಕ್ತ ಬೇಕರಿ, ಸ್ವೀಟ್ಸ್ ಮತ್ತು ಕೆಫೆ ಉದ್ಯಮಿಗಳು ಸಂಘವನ್ನು ಸಂಪರ್ಕಿಸಿ ಸದಸ್ಯತ್ವ ಪಡೆಯಬಹುದೆಂದು ಮನವಿ ಮಾಡಿದರು.

ಹಾಸನ ಬೇಕರಿ ಓನರ್ಸ್ ಅಸೋಸಿಯೇಷನ್ ಜಿಲ್ಲಾಧ್ಯಕ್ಷ ಎಂ.ಆರ್.ಪ್ರಸಾದ್, ಕಾರ್ಯದರ್ಶಿ ಹರೀಶ್‌ಕುಮಾರ್, ಡಾ. ಮಧು, ಶ್ರೀನಿವಾಸ್, ವೆಂಕಟೇಶ್, ಧರಣಿ, ವಿನಯ್ ಹಾಜರಿದ್ದರು.

## ಮೂಲಸೌಕರ್ಯಕ್ಕಾಗಿ ನಿರಂತರ ಹೋರಾಟದ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ಕಾರಿ ಶಾಲೆಗಳ ಬಲವರ್ಧನೆ, ನಾಮಫಲಕಗಳಲ್ಲಿ ಕನ್ನಡ ಕಡ್ಡಾಯಗೊಳಿಸುವಿಕೆ, ಫುಟ್‌ಪಾತ್ ತೆರವು, ಕೃಷಿ ಸಮಸ್ಯೆಗೆ ಪರಿಹಾರಕ್ಕೆ ಆಗ್ರಹಿಸಿ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ಹೊಯ್ಸಳ ವೇದಿಕೆ ಅಧ್ಯಕ್ಷ ನವೀನ್ ಎಚ್ಚರಿಕೆ ನೀಡಿದರು.




ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಾಜ್ಯದ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯಗಳಿಲ್ಲ. ಕಟ್ಟಡ, ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ ಹೀಗೆ ನಾನಾ ಸಮಸ್ಯೆಗಳಿಂದ ಮಕ್ಕಳು ಬಳಲುತ್ತಿದ್ದಾರೆ. ಸಮಸ್ಯೆಯ ಅರಿವಿದ್ದರೂ ಸರ್ಕಾರ ಹಾಗು ಜನಪ್ರತಿನಿಧಿಗಳು ಕಣ್ಮುಚ್ಚಿ ಕುಳಿತಿದ್ದಾರೆ.ಅಂಗಡಿ-ಮುಂಗಟ್ಟು, ಸರ್ಕಾರಿ ಕಚೇರಿಗಳಲ್ಲಿ ಶೇ. 60ರಷ್ಟು ಕನ್ನಡ ಕಡ್ಡಾಯ ನ್ಯಾಯಾಲಯದ ಆದೇಶವಿದ್ದರೂ ರಾಜ್ಯದಲ್ಲಿ ಪಾಲನೆಯಾಗುತ್ತಿಲ್ಲ. ಇದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಿದ್ದ ಸ್ಥಳೀಯ ಆಡಳಿತಾಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆಂದು ಆರೋಪಿಸಿದರು. ಹಾಸನ ಜಿಲ್ಲೆಯಲ್ಲೂ ಮೂಲಸೌಕರ್ಯಗಳ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬಸ್ ನಿಲ್ದಾಣ, ರಸ್ತೆ ಮತ್ತು ಸಾರ್ವಜನಿಕ ಶೌಚಾಲಯಗಳು ನಿರ್ವಹಣೆ ಕೊರತೆಯಿಂದ ಬಳಕೆಗೆ ಯೋಗ್ಯವಾಗಿಲ್ಲ ಎಂದು ದೂರಿದರು.

ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಸ್ಪಂದನೆ ಇಲ್ಲದಂತಾಗಿದೆ. ಜನರ ಸಮಸ್ಯೆಗಳನ್ನು ಆಲಿಸಿ ತ್ವರಿತವಾಗಿ ಪರಿಹರಿಸುವ ಬದಲು ಅಧಿಕಾರಿಗಳು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ಹಾಗೂ ಜನಪ್ರತಿನಿಧಿಗಳು ಜನರ ಸಂಕಷ್ಟಗಳನ್ನು ಅರಿತು ಅಭಿವೃದ್ಧಿಗೆ ಆದ್ಯತೆ ನೀಡಬೇಕೆಂದು ಒತ್ತಾಯಿಸಿದರು.

ಜಿಲ್ಲೆಯ ಸರ್ಕಾರಿ ಆಸ್ಪತ್ರೆ ಹಾಗೂ ಸರ್ಕಾರಿ ಶಾಲೆಗಳ ಮೂಲ ಸೌಕರ್ಯ ಸುಧಾರಿಸಿ, ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಒದಗಿಸಬೇಕು. ಅಲ್ಲದೆ ನಗರ ಪ್ರದೇಶಗಳಲ್ಲಿ ಪಾದಚಾರಿಗಳಿಗೆ ನಿರ್ಮಿಸಿರುವ ಫುಟ್‌ಪಾತ್‌ಗಳನ್ನು ವಾಹನಗಳು ಮತ್ತು ಅಂಗಡಿಗಳ ಅತಿಕ್ರಮಣ ದಿಂದ ಮುಕ್ತಗೊಳಿಸಿ, ಸುರಕ್ಷಿತವಾಗಿ ಓಡಾಡಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳದಿದ್ದರೆ ಹೋರಾಟ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

# ಭೂ ರಹಿತ ಹೈನುಗಾರರ ಸರ್ವೆಗೆ ಮುಂದಾದ ಇಲಾಖೆ

## ಜುಲೈ ಅಂತ್ಯಕ್ಕೆ ಪೂರ್ಣಗೊಳ್ಳುವ ವಿಶ್ವಾಸ | ನೆರವು ಕಲ್ಪಿಸುವ ಉದ್ದೇಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಜಿಲ್ಲೆಯಲ್ಲಿ ಹೈನುಗಾರಿಕೆಗೆ ಪುಷ್ಟಿ ನೀಡುವ ಉದ್ದೇಶದಿಂದ ಭೂ ರಹಿತ ಹೈನುಗಾರರ ಸಮೀಕ್ಷೆಗೆ ಪಶು ಸಂಗೋಪನಾ ಇಲಾಖೆ ಮುಂದಾಗಿದೆ.

ವ್ಯವಸಾಯದ ಜೊತೆಗೆ ಹೈನುಗಾರಿಕೆಯನ್ನು ಉಪಕಸುಬಾಗಿಸಿಕೊಂಡವರು ಹೆಚ್ಚಿನ ತೊಂದರೆ ಎದುರಿಸುವುದಿಲ್ಲ. ತಮ್ಮದೇ ಸ್ವಂತ ಜಮೀನಿನಲ್ಲಿ ಅಗತ್ಯ ಮೇವು ಹಾಗು ಇತರ ಸೌಕರ್ಯಗಳಿರುತ್ತವೆ. ಆದರೆ ಜಮೀನು ಇಲ್ಲದೆ ರಾಸುಗಳನ್ನು ಸಾಕಿ ಹೈನುಗಾರಿಕೆ ಮೂಲಕ ಕುಟುಂಬ ನಿರ್ವಹಣೆ ಮಾಡುವ ಕುಟುಂಬಗಳು ಅಧಿಕ ಪ್ರಮಾಣದಲ್ಲಿವೆ. ಅಂತಹವರನ್ನು ಗುರುತಿಸಿ ಅಗತ್ಯ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಯೋಜನೆಯೊಂದನ್ನು ಪಶುಪಾಲನಾ ಇಲಾಖೆ ಉಪನಿರ್ದೇಶಕ ಬಿ.ಕೆ.ರಮೇಶ್ ಅವರು ಕೈಗೆತ್ತಿಕೊಂಡಿದ್ದಾರೆ.

### ರಾಜ್ಯದಲ್ಲೇ ಮೊದಲ ಪ್ರಯತ್ನ

ಭೂ ರಹಿತ ಹೈನುಗಾರರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಕೈಗೆತ್ತಿಕೊಂಡಿರುವ ಪರಿಕಲ್ಪನೆ ಅಂದುಕೊಂಡರೆ ಸಾಕಾರವಾದರೆ ಅದರ ಸಂಪೂರ್ಣ ಯಶಸ್ಸು ಜಿಲ್ಲೆಗೆ ದೊರೆಯಲಿದೆ. ಹಾಸನ ಜಿಲ್ಲೆಯಲ್ಲಿ ಪ್ರಸ್ತು 5.41 ಲಕ್ಷ ರಾಸುಗಳಿವೆ. ಜಾನುವಾರುಗಳ ಸಂಖ್ಯೆಯಲ್ಲಿ ಬೆಳಗಾವಿ ಮೊದಲ ಸ್ಥಾನದಲ್ಲಿದ್ದರೆ



ಹಾಸನ ಎರಡನೇ ಸ್ಥಾನದಲ್ಲಿದೆ. ನಿತ್ಯ 15 ರಿಂದ 18 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಗ್ರಾಮೀಣ ಜನರು ಹೈನುಗಾರಿಕೆಯಿಂದಲೇ ಬದುಕು ಕಟ್ಟಿಕೊಂಡಿದ್ದಾರೆ. ಭೂ ರಹಿತರು ಮೇವಿಗಾಗಿ ಇನ್ನೊಬ್ಬರ ಬಳಿ ಅಂಗಲಾಚುವ ಪರಿಸ್ಥಿತಿ ಇದೆ. ಪ್ರಸ್ತುತ 3.5 ಲಕ್ಷ ಕುಟುಂಬಗಳು ಜಿಲ್ಲೆಯಲ್ಲಿ ರಾಸುಗಳ ಸಾಕಾಣಿಕೆಯಲ್ಲಿ ತೊಡಗಿವೆ. ಅದರಲ್ಲಿ ಕನಿಷ್ಟ 1 ಲಕ್ಷ ಕುಟುಂಬಗಳು ಭೂ ರಹಿತರು ಎಂದು ಅಂದಾಜಿಸಲಾಗಿದೆ. ಈ ಕುರಿತು ನಿಖರ ಮಾಹಿತಿ ಲಭ್ಯವಾದರೆ ಅದನ್ನು ಸರ್ಕಾರಕ್ಕೆ ಸಲ್ಲಿಸುವ ಯೋಜನೆಯನ್ನು ಅಧಿಕಾರಿಗಳು ಹಾಕಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಈಗಾಗಲೇ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಾಗೂ ಪಶು ಸಖಿಯರಿಂದ ಸರ್ವೆ ಪ್ರಾರಂಭಿಸಲಾಗಿದೆ. ಜುಲೈ ಅಂತ್ಯದ ವೇಳೆಗೆ ನಿಖರ ಅಂಕಿಅಂಶ ಅಧಿಕಾರಿಗಳ ಕೈ ಸೇರಲಿದೆ.

### ಹೈನುಗಾರರಿಗೆ ಏನು ಲಾಭ


ಹೈನುಗಾರಿಕೆಯನ್ನೇ ನಂಬಿ ಬದುಕು ಕಟ್ಟಿಕೊಂಡಿರುವವರು ಮೇವಿಗಾಗಿ ಪರದಾಡುತ್ತಿರುವುದು ಒಂದೆಡೆಯಾದರೆ ಅದಕ್ಕೆ ಹಾಕುವ ಆಹಾರ ಪದಾರ್ಥವನ್ನು ದುಬಾರಿ ಬೆಲೆ ಕೊಟ್ಟು ಖರೀದಿಸಬೇಕು. ರಾಸುಗಳ ಆರೋಗ್ಯ ನಿರ್ವಹಣೆ, ವಿಮೆ ಮುಂತಾದ ಸೌಲಭ್ಯಗಳು ಸಿಗುವುದು ಅಪರೂಪ. ಅಕಾಲಿಕವಾಗಿ ಜಾನುವಾರುಗಳು ಮೃತಪಟ್ಟರೆ ರಾಜ್ಯ ಸರ್ಕಾರ ಅನುಗ್ರಹ ಯೋಜನೆಯಡಿ ಪರಿಹಾರ ನೀಡುತ್ತಿದೆಯಾದರೂ ಕಳೆದ ನಾಲ್ಕು ವರ್ಷಗಳಿಂದ ಹಣ ಬಿಡುಗಡೆಯಾಗದೆ ಸಮಸ್ಯೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಹೈನುಗಾರಿಕೆಯನ್ನೇ ನಂಬಿರುವ ಭೂರಹಿತ ಕುಟುಂಬಸ್ಥರು ತೊಂದರೆ ಅನುಭವಿಸುತ್ತಾರೆ. ಆದ್ದರಿಂದ ಅಂತಹವರಿಗೆ ವಿಶೇಷ ಸೌಲಭ್ಯ ಕಲ್ಪಿಸುವುದು ಸರ್ವೆಯ ಉದ್ದೇಶವಾಗಿದೆ. ಜಿಲ್ಲೆಯಲ್ಲಿ 33 ಪಶು ಆಸ್ಪತ್ರೆ, 1 ಪಾಲಿ ಕ್ಲಿನಿಕ್, 108 ಪಶು ಚಿಕಿತ್ಸಾಲಯ, 72 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿದ್ದು ಈ ಮೂಲಕ ಸರ್ವೆ ಕಾರ್ಯ ನಡೆಯುತ್ತಿದೆ.

### ಜಾನುವಾರುಗಳ ಮಾಹಿತಿ

ಆಲೂರು ತಾಲ್ಲೂಕಿನಲ್ಲಿ 29766, ಅರಕಲಗೂಡು 73722, ಅರಸೀಕೆರೆ 88541, ಬೇಲೂರು 56538, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 74286, ಹಾಸನದಲ್ಲಿ 92464, ಹೊಳೆನರಸೀಪುರದಲ್ಲಿ 55789 ಹಾಗು ಸಕಲೇಶಪುರದಲ್ಲಿ 21922 ಹಸುಗಳಿವೆ. ಆಲೂರಿನಲ್ಲಿ 555, ಅರಕಲಗೂಡು 6380, ಅರಸೀಕೆರೆ 5777, ಬೇಲೂರು 1926, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 36317, ಹಾಸನದಲ್ಲಿ 3570, ಹೊಳೆನರಸೀಪುರದಲ್ಲಿ 11473 ಹಾಗೂ ಸಕಲೇಶಪುರದಲ್ಲಿ 2011 ಎಮ್ಮೆಗಳಿವೆ.

# ಪುನೀತ್ ಕೆರೆಹಳ್ಳಿ ಬಂಧನಕ್ಕೆ ಸ್ವಾಮೀಜಿ ಖಂಡನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಆಲೂರು: ಗೋ ರಕ್ಷಣೆ, ಹಿಂದೂ ದೇವಾಲಯ ಉಳಿವಿಗಾಗಿ ನಿರಂತರ ಹೋರಾಟ ಮಾಡುತ್ತಾ ಧರ್ಮ ರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರ ರಕ್ಷಣಾ ಪಡೆಯ ಪುನೀತ್ ಕೆರೆಹಳ್ಳಿ ಅವರನ್ನು ಏಕಾಏಕಿ ಬಂಧಿಸಿರುವುದು ಖಂಡನೀಯ ಎಂದು ಕಾರ್ಜುವಳ್ಳಿ ಹಿರೇಮಠದ ಪೀಠಾಧ್ಯಕ್ಷ ಸದಾಶಿವ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ಪುನೀತ್ ಕೆರೆಹಳ್ಳಿ ಅವರು ಯುವಕರ ತಂಡ ಕಟ್ಟಿಕೊಂಡು ರಾಷ್ಟ್ರಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಹಿಂದೂ ಧರ್ಮ ಸಂರಕ್ಷಣೆಗಾಗಿ ಪ್ರಾಣದ ಹಂಗು ತೊರೆದು ಕೆಲಸ ಮಾಡುತ್ತಿದ್ದಾರೆ. ಯಾವುದೇ ಒಂದು ಧರ್ಮ ಅಥವಾ ಜನಾಂಗದ ವಿರುದ್ಧ ಅವರು ಕೆಲಸ ಮಾಡುತ್ತಿಲ್ಲ. ಆದರೆ ಮೌಲ್ವಿಯೊಬ್ಬರಿಗೆ ನಿಂದಿಸಿದ್ದಾರೆಂಬ ಸುಳ್ಳು ಆರೋಪದಡಿ ಅವರನ್ನು ಯಾವುದೇ ನೋಟೀಸ್ ನೀಡದೆ ಬಂಧಿಸಿರುವುದು ಖಂಡನೀಯ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಬೇಕಾಗುತ್ತದೆ. ಪ್ರಕರಣದ ಸತ್ಯಾಸತ್ಯತೆ ಅರಿತು ಕ್ರಮ ಜರುಗಿಸಬೇಕು. ಕೆರೆಹಳ್ಳಿಯ ಮನೆಯಲ್ಲಿದ್ದಾಗ ತಂದೆ-ತಾಯಿಯ ಎದುರೇ ಪುನೀತ್ ಅವರನ್ನು ಬಂಧಿಸಿರುವುದು ಅಕ್ಷಮ್ಯ. ರಾಜ್ಯ ಸರ್ಕಾರದ ಈ ನಡೆಯನ್ನು ಖಂಡನೀಯವಾಗಿದೆ ಎಂದು ಅವರು ಹೇಳಿದ್ದಾರೆ.

### ಜಾವಗಲ್ ಸರ್ಕಾರಿ ಪಿಯು ಕಾಲೇಜಿನಲ್ಲಿ ಕ್ರೀಡಾ, ಸಾಂಸ್ಕೃತಿಕ ಸಂಘ ಉದ್ಘಾಟನೆ

# ವಿದ್ಯೆಯ ಜೊತೆಗೆ ವಿನಯವೂ ಇರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಜಾವಗಲ್ : ತಾಲೂಕಿನ ಜಾವಗಲ್ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ 2026-27ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘಗಳ ಉದ್ಘಾಟನಾ ಸಮಾರಂಭವು ಶನಿವಾರ ವಿಜೃಂಭಣೆಯಿಂದ ಜರುಗಿತು.

ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಲಕ್ಷ್ಮಣ್ ಗಂಗಾ, ಕಾಲೇಜಿನ ಪ್ರಾಚಾರ್ಯ ಉಮೇಶ್ ಹೊಸಹಳ್ಳಿ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಪುಟ್ಟೇಗೌಡ ಅವರು ಜಂಟಿಯಾಗಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಾ. ಲಕ್ಷ್ಮಣ್ ಗಂಗಾ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಬಹಳ ಮುಖ್ಯ. ಕೇವಲ ವಿದ್ಯೆ ಇದ್ದರೆ



ಸಾಲದು, ಅದರ ಜೊತೆಗೆ ವಿನಯವೂ ಇರಬೇಕು. ವಿದ್ಯಾರ್ಥಿಗಳು ಉನ್ನತ ಹುದ್ದೆಗೇರಬೇಕು ಎಂಬ ಮಹತ್ವಾಕಾಂಕ್ಷೆ ಗುರುಗಳಿಗಿರುತ್ತದೆಯೇ ಹೊರತು, ಆಕ್ಷೇಪಿಸುವವರಲ್ಲಿ ಯಾವುದೇ ಸ್ವಾರ್ಥವಿರುವುದಿಲ್ಲ. ನಾವು ಗಳಿಸುವ ಸಂಬಳದಲ್ಲಿ ಅವರು ಪಾಲು ಕೇಳುವುದಿಲ್ಲ. ಅಂತಹ ನಿರಪೇಕ್ಷ ಗುರುಗಳನ್ನು ಸದಾ ಗೌರವಿಸಿದಾಗ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದು ಕಿವಿಮಾತು ಹೇಳಿದರು. ಗುರುಗಳ ಮಾರ್ಗದರ್ಶನದಲ್ಲಿ ಶ್ರದ್ಧೆಯಿಂದ ಕಲಿತಿದ್ದರಿಂದಲೇ, ಇಂದು ನನ್ನ ಗುರುಗಳಾಗಿರುವ ಈ ಕಾಲೇಜಿನ ಪ್ರಾಚಾರ್ಯರೊಂದಿಗೆ ವೇದಿಕೆ ಹಂಚಿಕೊಳ್ಳುವ ಭಾಗ್ಯ ನನಗೆ ದೊರೆತಿದೆ ಎಂದು ಹೆಮ್ಮೆಯಿಂದ ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಉಮೇಶ್ ಹೊಸಹಳ್ಳಿ ಮಾತನಾಡಿ, ‘ವರ್ಣಮಾತ್ರಂ ಕಲಿಸಿದಾತಂ ಗುರು’ ಎಂದು ಸೋಮೇಶ್ವರ ಕವಿ ಹೇಳಿದ್ದಾನೆ. ‘ತುಂಬಿದ ಕೊಡ ತುಳುಕುವುದಿಲ್ಲ’ ಎನ್ನುವಂತೆ ಡಾ. ಲಕ್ಷ್ಮಣ್ ಆಗರ್ಭ ಶ್ರೀಮಂತ ಕುಟುಂಬದಿಂದ ಬಂದಿದ್ದರೂ, ಸ್ವಲ್ಪವೂ ಗರ್ವವಿಲ್ಲದೆ ಸಾಮಾನ್ಯ ವಿದ್ಯಾರ್ಥಿಯಂತೆ ಸರ್ಕಾರಿ ಕಾಲೇಜಿನಲ್ಲಿ ಓದಿ ಇಂದು ಶ್ರೇಷ್ಠ ವೈದ್ಯರಾಗಿದ್ದಾರೆ. ಕೇವಲ ಒಂದು ಸಂದೇಶ ಕಳುಹಿಸಿದ್ದಕ್ಕೆ ಮಂಗಳೂರಿನಿಂದ ಬಂದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ್ದು ತೀವ್ರ ಸಂತೋಷ ತಂದಿದೆ. ನಿಮ್ಮ ಇತಿಹಾಸ ಉಪನ್ಯಾಸಕರೂ ನನ್ನ ವಿದ್ಯಾರ್ಥಿಯೇ ಆಗಿದ್ದರು. ನೀವೂ ಸಹ ಭವಿಷ್ಯದಲ್ಲಿ ಉನ್ನತ ಸ್ಥಾನಕ್ಕೇರಿ ಕಾಲೇಜಿಗೆ ಕೀರ್ತಿ ತರಬೇಕು ಎಂದು ಹಾರೈಸಿದರು.

ಸಿಡಿಸಿ ಉಪಾಧ್ಯಕ್ಷ ಪುಟ್ಟೇಗೌಡ ಮಾತನಾಡಿ, ಮುಂಬರುವ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲಾ 500 ರೂ. ನಗದು ಬಹುಮಾನ ನೀಡುವುದಾಗಿ ಘೋಷಿಸಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕ ದಯಾನಂದ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ದುಡಿಯುವ ವರ್ಗದ ಪರ ಧ್ವನಿ ಎತ್ತುವುದು ಸುಲಭದ ಕೆಲಸವಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ದುಡಿಯುವ ಜನರ ಪರವಾಗಿ ಧ್ವನಿ ಎತ್ತುವುದು ಮಾತ್ರವಲ್ಲದೆ ಸಮಸ್ಯೆಗೆ ಪರಿಹಾರ ಕಲ್ಪಿಸುವ ತನಕ ಹೋರಾಡುವ ಛಲ ಇರುವುದು ಕಮ್ಯುನಿಸ್ಟರಿಗೆ ಮಾತ್ರ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಅಭಿಪ್ರಾಯಪಟ್ಟರು.

ಇತ್ತೀಚೆಗೆ ನಿಧನರಾದ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಜಿ.ಪಿ.ಸತ್ಯನಾರಾಯಣ ಅವರ ನಿಧನಕ್ಕೆ ಸಿಐಟಿಯು ಹಾಗು ಸಿಪಿಐ(ಎಂ) ವತಿಯಿಂದ ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾತನಾಡಿ, ಸತ್ಯನಾರಾಯಣ ಅವರು ವರ್ಗರಹಿತ ಸಮಾಜ ಕಟ್ಟಲು ಶ್ರಮಿಸಿದ ಸಂಗಾತಿ. ಕಮ್ಯುನಿಸ್ಟ್ ಆಗಿ ಕೆಲಸ ಮಾಡುವುದು ಸುಲಭವಲ್ಲ. ದಿನದಿಂದ ದಿನಕ್ಕೆ




ಕಾರ್ಮಿಕ ವರ್ಗ ಸಂಕಷ್ಟಕ್ಕೆ ಸಿಲುಕುತ್ತಿದೆ, ದುಡಿಯುವ ಜನರ ಬದುಕು ದುಸ್ತರವಾಗುತ್ತಿದೆ. ಇಂತಹವರ ಸಮಸ್ಯೆಗಳನ್ನ ಮುಂದಿಟ್ಟು ಹೋರಾಟ ಮಾಡಲು ಮುಂಚೂಣಿಯಲ್ಲಿದ್ದ ನಾಯಕನ ಅಗಲಿಕೆ ಸಾಕಷ್ಟು ನಷ್ಟ ತಂದೊಡ್ಡಿದೆ. ದೊಡ್ಡ ದೊಡ್ಡ ಸವಾಲುಗಳು ನಮ್ಮ ಎದುರಿಗಿವೆ. ಬೆಂಗಳೂರು ಸೇರಿ ರಾಜ್ಯದ ಹಲವೆಡೆ ಬೀದಿ ಬದಿ ವ್ಯಾಪಾರಿಗಳನ್ನ ಎತ್ತಂಗಡಿ ಮಾಡಲಾಗುತ್ತಿದೆ. ರಾಜ್ಯದ ಸಚಿವರೇ ಬಹಿರಂಗವಾಗಿ ಅವಮಾನವೀಯ ಹೇಳಿಕೆ ನೀಡುವ ಜೊತೆಗೆ ಸುಪ್ರೀಂ ಕೋರ್ಟ್ ಆದೇಶವೆಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ದೌರ್ಜನ್ಯಕ್ಕೆ ಭಾಷೆ, ಪ್ರದೇಶದ ಆಧಾರದಲ್ಲಿ ವಿಭಜನೆ ಮಾಡುವ ಕೆಲಸ ಆಗುತ್ತಿದೆ. ಇಂತಹ ಸವಾಲುಗಳ ನಡುವೆ ಜಿ.ಪಿ.ಸತ್ಯನಾರಾಯಣ ಅವರ ಅಗಲಿಕೆ ಕಾರ್ಮಿಕ, ಕಮ್ಯುನಿಸ್ಟ್ ಚಳವಳಿಗೆ ತುಂಬಲಾರದ ನಷ್ಟವುಂಟು ಮಾಡಿದೆ ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ಜಿ.ಪಿ.ಸತ್ಯನಾರಾಯಣ ಅವರು ಕಾರ್ಮಿಕರಾಗಿ ಕಾರ್ಮಿಕ ಸಂಘಟನೆ ಸೇರಿ ಬಳಿಕ ಕಾರ್ಮಿಕ ನಾಯಕರಾಗಿ ಬೆಳೆದವರು. ಮೂರು ಬಾರಿ ಸಿಐಟಿಯು ಜಿಲ್ಲಾ ಖಜಾಂಚಿಯಾಗಿ, ಹಾಲಿ ಉಪಾಧ್ಯಕ್ಷರಾಗಿ ಜೀವಿತದ ಕೊನೆಯ ಕ್ಷಣದ ವರೆಗೂ ಕಾರ್ಮಿಕರ ವಿಮೋಚನೆಗಾಗಿ ಹೋರಾಟ ಮಾಡಿದ್ದಾರೆ ಎಂದರು.

ಸಿಐಟಿಯು ಮುಖಂಡರಾದ ವಿ.ಸುಕುಮಾರ್, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್. ಆರ್.ನವೀನ್ ಕುಮಾರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಅರವಿಂದ, ಡಿವೈಎಫ್ಐ ಪೃಥ್ವಿ, ವಿಜಯ್ ಕುಮಾರ್ ದಂಡೋರ, ಸತ್ಯನಾರಾಯಣ ಅವರ ಪತ್ನಿ ವನಜಾಕ್ಷಿ, ಮಗ ಕಾರ್ತಿಕ್ ಮೊದಲಾದವರಿದ್ದರು.

# ಮಾಜಿ ಶಾಸಕ ಪುಟ್ಟರಂಗನಾಥ್ ನಿಧನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಬೇಲೂರು: ಮಾಜಿ ಶಾಸಕ ಎಚ್.ಎಸ್. ಪುಟ್ಟರಂಗನಾಥ್ (89) ಮಂಗಳವಾರ ನಿಧನರಾದರು.

ಕಳೆದ ಹಲವು ದಿನಗಳಿಂದ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಪಟ್ಟಣದಲ್ಲಿರುವ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು. 1999ರಲ್ಲಿ ಬೇಲೂರು ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಮೀಸಲು ಕ್ಷೇತ್ರವಾಗಿದ್ದ ಬೇಲೂರು ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಬಿಜೆಪಿಯಿಂದ ಸ್ಪರ್ಧಿಸಿ ಮಾಜಿ ಶಾಸಕ ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ ಅವರ ವಿರುದ್ಧ ಗೆಲುವು ಸಾಧಿಸಿ 1999-2004 ರವರೆಗೆ ಶಾಸಕರಾಗಿದ್ದರು.

ಪುಟ್ಟರಂಗನಾಥ್ ಅವರ ಸೊಸೆ ಲತಾ ಮಂಜೇಶ್ವರಿ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ಜಯ ಸಾಧಿಸಿದ್ದರು. ಪುತ್ರ ದೇವು ಪ್ರಸಾದ್ ಜೆಡಿಎಸ್‌ನ ಮುಖಂಡರಾಗಿದ್ದಾರೆ. ಪುಟ್ಟರಂಗನಾಥ್ ಅವರ ನಿಧನಕ್ಕೆ ವಿವಿಧ ಪಕ್ಷದ ಮುಖಂಡರು ಸಂತಾಪ ಸೂಚಿಸಿ ಕಂಬನಿ ಮಿಡಿದಿದ್ದಾರೆ. ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡರು, ರಾಮಕೃಷ್ಣ ಹೆಗಡೆ ಹಾಗೂ ಬಂಗಾರಪ್ಪ ಸೇರಿದಂತೆ ವಿವಿಧ ರಾಜಕೀಯ ಮೇರು ನಾಯಕರ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು.

ಮೃತರು ಇಬ್ಬರು ಪುತ್ರರು ಹಾಗೂ ನಾಲ್ವರು ಹೆಣ್ಣು ಮಕ್ಕಳು ಸೇರಿ ಅಪಾರ ಅಭಿಮಾನಿ ಬಳಗ ಹೊಂದಿದ್ದರು.

ಪುಟ್ಟರಂಗನಾಥ್ ಅವರ ನಿಧನಕ್ಕೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಾರ್ವಜನಿಕರು ಹಾಗೂ ಗಣ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಜುಲೈ-08

1497: ವಾಸ್ಕೋ ಡ ಗಾಮಾ ನೇತೃತ್ವದ ಪೋರ್ಚುಗೀಸ್ ನೌಕಾಪಡೆ ಲಿಸ್ಬನ್‌ನಿಂದ ಭಾರತಕ್ಕೆ ಐತಿಹಾಸಿಕ ಸಮುದ್ರಯಾನ ಆರಂಭಿಸಿತು.

1858: ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಅಂತ್ಯಗೊಂಡು, ಭಾರತದ ಆಡಳಿತವು ಬ್ರಿಟಿಷ್ ರಾಜಸತ್ತೆಯ ಅಧೀನಕ್ಕೆ ಸಾಗುವ ಪ್ರಕ್ರಿಯೆ ಆರಂಭವಾಯಿತು.

### ಜನನ

1914: ಭಾರತದ ಹಿರಿಯ ರಾಜಕಾರಣಿ ಜ್ಯೋತಿ ಬಸು

1943: ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

1972: ಸೌರವ್ ಗಂಗೂಲಿ, ಭಾರತದ ಕ್ರಿಕೆಟಿಗ

# ಹೆದ್ದಾರಿಯೆಂಬ ಹೆಬ್ಬಾವು-6

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ**

ಒಂದಷ್ಟು ದೂರ ನಡೆದಿರಬಹುದು, ಮತ್ತೊಂದು ಗೊಂದಲದಲ್ಲಿ ಮುಳುಗಬೇಕಾದ ಸಂದರ್ಭ ಬಂತು. ಈ ಜೀಪ್, ಲಾರಿ ಹಳವಂಡದಲ್ಲಿ ನಾನೆಷ್ಟು ದೂರ ಬಂದಿದ್ದೇನೆ? ಆ ದನ ತಿರುಗುವ ದಾರಿ ಹಿಂದಾಯ್ತೋ? ಮುಂದೆ ಸಿಗಲಿದೆಯೋ? ಸ್ಥಳೀಯರ ಲೆಕ್ಕಾಚಾರದಂತೆ ಇಲ್ಲೇ ಸ್ವಲ್ಪ ದೂರ ಎಂದರೆ ಮಿನಿಮಮ್ ಒಂದು ಮೈಲಿ; ಹಾಗಾದ್ರೆ ಇನ್ನೆಷ್ಟು ದೂರ ನಡೆಯಬೇಕೋ ಎಂದುಕೊಂಡು ಆಗದ್ದಾಗಲಿ ನಡೆದರೆ ಸಂಜೆಯೊಳಗೆ ಸಕಲೇಶಪುರವಾದರೂ ಸಿಗುವುದಲ್ಲ ಎಂಬ ಹುಂಬ ನಂಬಿಕೆಯೊಡನೆ ನಡೆಯತೊಡಗಿದೆ. ಅಷ್ಟರಲ್ಲಾಗಲೇ ಮುಂಜಾನೆಯ ಚುಮು ಚುಮು ಬೆಳಕು ಚೆನ್ನಾಗಿಯೇ ಹರಡತೊಡಗಿತು.

ಅಂತೂ ಇಂತೂ ಆ ರಸ್ತೆ ಬದಿಯ ಮಾರ್ಗದರ್ಶಿಗಳು ಹೇಳಿದ್ದ ದನ ತಿರುಗುವ ದಾರಿ ಗೋಚರಿಸಿದಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಆದರೂ ಗೊಂದಲ ಮುಗಿಯಲೇ ಇಲ್ಲ. ಅದು ಅವರು ಹೇಳಿದ ದಾರಿಯೋ ಅಥವಾ ಇದೇ ಬೇರೆಯದೋ ಎಂಬುದು. ತಣ್ಣೀರಲ್ಲಿ ಬಿದ್ದವನಿಗೆ ಮಳೆಯೇನು? ಚಳಿಯೇನು? ಅಂದುಕೊಂಡು ಅದೇನಾಗುತ್ತೋ ನೋಡೋಣವೆಂದು ಕೈಕಾಲುಗಳು ನಮಗಿನ್ನು ಸಾಧ್ಯವೇ ಇಲ್ಲವೆಂದು ಗೋಗರೆಯುತ್ತಿದ್ದರೂ, ದೇಹದ ಚೈತನ್ಯ ಕುಂದುತ್ತಿದ್ದರೂ ಹೇಗಾದರೂ ಮಾಡಿ ರೈಲು ಹಳಿ ತಲುಪಬೇಕೆಂದು ಅಕ್ಷರಶಃ ಅಭೇದ್ಯ ಅರಣ್ಯದೊಳಗಿನ ದನ ತುಳಿದ ದಾರಿಯಲ್ಲಿ ಅಮೂಲ್ಯವಾದದ್ದೇನನ್ನೋ ಹುಡುಕುವಂತೆ ಹಲ್ಲುಕಚ್ಚಿಕೊಂಡು ಮುಂದಡಿಯಿಡತೊಡಗಿದೆ.

ಮಳೆಗಾಲದಲ್ಲಿ ಮೇಲಿನ ಗುಡ್ಡದಿಂದ ನೀರು ಹರಿದು ಬಂದು ರಸ್ತೆಯಡಿಯ ಮೋರಿಯನ್ನು ಹಾದು ಪ್ರಪಾತಕ್ಕೆ ಹರಿಯುವ ಝರಿ ಈಗ ಬೇಸಿಗೆಯಲ್ಲಿ ಒಣಗಿ, ದನ-ಜನರು ತಿರುಗುವ ಹಾದಿಯಾಗಿ ಉಪಯೋಗಿಸಲ್ಪಡುವಂತೆ ಕಾಣುತ್ತಿತ್ತು. ಹಾದಿಯ ತುಂಬಾ ನದಿಪಾತ್ರದಲ್ಲಿರುವ ಉರುಟುಗಲ್ಲುಗಳೇ ತುಂಬಿದ್ದು, ದನ ಕರುಗಳ ನಡೆದಾಟದಿಂದ ಎಲ್ಲೆಡೆಯೂ ಕೆಸರು ತುಂಬಿಹೊಗಿತ್ತು. ಇದು ಅದೇ ದಾರಿ ಹೌದೋ ಅಲ್ಲವೋ ಅಂತೂ ಈ ಹೆಬ್ಬಾವಿನಂಥ ಹೆದ್ದಾರಿಯಿಂದ ತಪ್ಪಿಸಿಕೊಳ್ಳೋಣವೆಂದು ಕೆಸರಿನ ಹಾದಿಯೊಳಗೆ ಕಾಲಿರಿಸಿ ಉಂಡುಗಲ್ಲುಗಳ ಮೇಲೆ ನೆಗೆನೆಗೆದು ಕೆಸರಿನಿಂದ ಪಾರಾಗುವುದಿರಲಿ, ಇನ್ನೂ ಹೆಚ್ಚೇ ಕೆಸರನ್ನು ಹಾರಿಸಿಕೊಂಡು ನಡೆಯತೊಡಗಿದೆ.

ಬೆಳಗಿನ ಬಿಸಿಲಿಗೆ ಇಬ್ಬನಿ ಮಿಂದು ಚರಚರನೆ ಮಿರುಗುತ್ತಿದ್ದ ಈಚಲ ಗರಿಗಳ ಮೃದು ನಿನಾದ ಕಿವಿಗೆ ಸೋಕಿ ಏನೋ ಒಂದು ರೀತಿಯ ನೆಮ್ಮದಿ ದೊರಕತೊಡಗಿತು. ಕಣ್ಣು ಹಾಯಿಸಿದಷ್ಟು ದೂರವರೆಗೆ ಹರಡಿದ್ದ ಈಚಲ ಹರದಲ್ಲಿ ಅನೇಕ ಕಡೆ ನನಗೆ ಕಾಡುಮೊಲಗಳು, ಪುರ್ಲಕ್ಕಿಗಳ ದರ್ಶನವಾಯ್ತು. ನನ್ನನ್ನು ಕಂಡಕೂಡಲೇ ಪುಳಕ್ಕನೆ ನೆಗೆದು ಕಣ್ಮರೆಯಾಗುತ್ತಿದ್ದ ಮೊಲಗಳು, ಗಾಬರಿಗೊಂಡು ಲಂಟಾನದೊಳಗೆ ನುಗ್ಗುತ್ತಿದ್ದ ಮುಂಗುಸಿಗಳು, ಗಲಿಬಿಲಿ ಮಾಡುತ್ತಾ ಚೆದುರಿಹೋಗುತ್ತಿದ್ದ ಪುರ್ಲಕ್ಕಿಗಳು ನನ್ನ ಆಯಾಸವನ್ನು ಆದಷ್ಟೂ ಕಡಿಮೆ ಮಾಡಿದವು.

ಹ'ರ' ಏರಿ ಇಳಿಯುತ್ತಿದ್ದವನಿಗೆ ನಾನು ನಡೆಯುತ್ತಿದ್ದ ದಾರಿ ಮುಂದಿನ ತಿರುವಿನಲ್ಲಿ ಕವಲಾಗಿದ್ದು ಸ್ಪಷ್ಟವಾಗಿ ಗೋಚರಿಸಿತು. ಚುಮುಚುಮು ಬೆಳಕು ವಿಸ್ತಾರವಾಗತೊಡಗಿತು. ಚೆನ್ನಾಗಿ ಬೆಳಕು ಹರಿಯುತ್ತಿದ್ದಂತೆ ವಾಚಿನೆಡೆಗೆ ನೋಡುತ್ತೇನೆ, ಆಗಲೇ ಬೆಳಗಿನ ಆರೂವರೆ ಆಗಿದೆ. ಅಯ್ಯೋ ಎಲ್ಲಾದರೂ ನಮ್ಮ ನ್ಯಾಕ್ ತಂಡ ಮುಂದಾದರೆ ಕಷ್ಟ ಆಗುತ್ತಲ್ಲ ಎಂದು ಏದುಸಿರು ಬರುತ್ತಿದ್ದರೂ ನಿಂತರೆ ಕೆಲಸ ಕೆಡುತ್ತದೆ ಎಂದು ಒಂದೇ ವೇಗದಲ್ಲಿ ನಡೆಯತೊಡಗಿದೆ. ವಿಶಾಲವಾದ ಈಚಲ ಮರವೊಂದು ಎದುರಾಯಿತು. ನಾನು ನಡೆಯುತ್ತಿದ್ದ ಹಾದಿಯು ಈಚಲ ಗುತ್ತಿಗಳ ನಡುವೆ ಎರಡು ಮೂರು ತಿರುವುಗಳನ್ನು ತೆಗೆದುಕೊಳ್ಳುವುದು, ಸ್ವಲ್ಪ ದೂರ ನಡೆದ ನಂತರ ಇನ್ನೊಂದು ಯಾವುದೋ ಕಾಲ್ದಾರಿ ಬಂದು ಸೇರುವುದು, ಒಟ್ಟಿನಲ್ಲಿ ನಾನು ಎಲ್ಲಿ, ಯಾಕೆ, ಎತ್ತಕಡೆ ನಡೆಯುತ್ತಿದ್ದೇನೆ ಎಂಬುದನ್ನೇ ಮರೆಸುವಂತೆ ದೊಡ್ಡ ಗೊಂದಲವನ್ನೇ ಸೃಷ್ಟಿಸಿತ್ತು. ಎತ್ತರದಿಂದ ಅಂದರೆ ಆಗಸದ ಅಂತರಾಳದಿಂದ ನೋಡಿದರೆ ಈ ಕಾಲ್ದಾರಿಗಳ ಜಾಲ ಹೆಚ್ಚೂಕಡಿಮೆ ಜೇಡರ ಬಲೆಯಂತೆಯೇ ಕಾಣುತ್ತಿತ್ತೇನೋ. ಈಚಲ ಗುತ್ತಿಯೊಂದರಿಂದ ಮೊಲಗಳೆರಡು ಪಣಕ್ಕನೇ ಚಿಮ್ಮಿ ಆ ದಾರಿಗಳಲ್ಲಿ ಯಾವುದೋ ಒಂದರೊಳಗೆ ನುಸುಳಿ ಎತ್ತಲೋ ನಾಪತ್ತೆಯಾದವು. ತೆಳ್ಳನೆಯ ತಿಳಿಬಿಸಿಲಿಗೆ ನವಿಲುಗಳ ಗುಂಪೊಂದು ಕತ್ತುಗಳನ್ನೆತ್ತಿ ಅತ್ತಿತ್ತ ಕಣ್ಣು ಹಾಯಿಸುತ್ತಾ ಕಿವಿ ಗಡಚಿಕ್ಕುವಂತೆ ಕೂಗುತ್ತಿದ್ದವು. ಈಚಲ ಮರದಲ್ಲಿ ಅಲ್ಲಲ್ಲಿ ಇದ್ದ ಚೊಟ್ಟೆಹಣ್ಣಿನ ಗಿಡಗಳಲ್ಲಿದ್ದ ಬಿಳಿ



ಬಣ್ಣದ ಚೊಟ್ಟೆಹಣ್ಣನ್ನು ಮುಳ್ಳುಗಳೆಡೆಯಿಂದ ನಿಧಾನವಾಗಿ ಬಿಡಿಸಿಕೊಂಡೆ. ಬಾಯೊಳಗಿಡುತ್ತಿದ್ದಂತೆ ಕರಗಿಯೇ ಹೋಗುತ್ತವೆಯೆನಿಸುತ್ತಿದ್ದ ಹಣ್ಣುಗಳು ಇನ್ನೂ ತಿನ್ನುವ ಆಸೆ ಹುಟ್ಟಿಸಿದರೂ ತಡವಾಗಬಹುದೆಂದು ತೋಚಿದೆಡೆಗೆ ದೇವರೇಗತಿ ಎಂದು ಅಂದಾಜಿನಲ್ಲಿ ನಡೆಯತೊಡಗಿದೆ. ಸುಮಾರು ಏಳೂವರೆ ಇರಬಹುದು. ಬೆಳಗಿನ ಬಿಸಿಲು ತೀಕ್ಷ್ಣವಾಗಿ ರಾಚತೊಡಗಿತು. ಈಚಲಗರಿಗಳ ಮೇಲೆ ಪಸರಿಸಿದ ಮಂಜಿನ ಹನಿಗಳು ಬಿಸಿಲಿಗೆ ಆವಿಯಾಗತೊಡಗಿದವು. ಈಚಲಗರಿಗಳು ಬಿಸಿಲಿನ ಝಳಕ್ಕೆ ಚೂರಿಯಂತೆ ಜಳಜಳ ಸದ್ದು ಮಾಡತೊಡಗಿದವು. ಹಲವೆಡೆ ಕಾಲ್ದಾರಿ ನಾಲ್ಕಾರು ಈಚಲ ಗುತ್ತಿಗಳ ನಡುವೆ ಇದ್ದಕ್ಕಿದ್ದಂತೆ ಕಾಣೆಯಾಗುತ್ತಿತ್ತು. ಕತ್ತನ್ನು ಅತ್ತಿತ್ತ ಆಡಿಸಿ ಹುಡುಕಿದರೆ ಮತ್ತೆಲ್ಲೋ ಕಾಲ್ದಾರಿಯೊಂದು ಪ್ರತ್ಯಕ್ಷವಾಗುತ್ತಿತ್ತು. ನಾನೆತ್ತ ಹೋಗಬೇಕಿತ್ತೋ? ಈ ಹಾದಿಗಳು ಎತ್ತ ಕರೆದೊಯ್ಯುತ್ತಿವೆಯೋ? ನೈಸರ್ಗಿಕ ಜಂತರ್‌ಮಂತರ್ ಒಂದನ್ನು ಹೊಕ್ಕು ಸುತ್ತಿದಲ್ಲೇ ಸುತ್ತುತ್ತಿದ್ದೇನೋ ಎಂದು ಭ್ರಾಂತಿ ಶುರುವಾಯ್ತು.

ಅಷ್ಟರಲ್ಲಿ ಯಾರೋ ಕೆಮ್ಮಿದಂತಾಯ್ತು. ಅಷ್ಟೆತ್ತರ ಬೆಳೆದು ನಿಂತಿದ್ದ ಈಚಲ ಗಿಡಗಳಾಚೆ ಮನುಷ್ಯಾಕೃತಿಯೊಂದು ದೊಣ್ಣೆ ಹಾಗೂ ಗೋಣಿಚೀಲವನ್ನೆತ್ತಿಕೊಂಡು ಅದೆತ್ತಲೋ ಹೋಗುತ್ತಿದ್ದುದು ಗಮನಕ್ಕೆ ಬಂತು. ಇದ್ಯಾವನಪ್ಪಾ ಈ ಸ್ಥಳದಲ್ಲಿ? ನೋಡಿದರೆ ಯಾರೋ ಶಿಕಾರಿಯವನಂತೆ ಕಾಣುತ್ತಾನೆ ಎಂದುಕೊಂಡು ಹೋಯ್‌ಟಿ ಎಂದು ಗಮನ ಸೆಳೆಯಲು ಕೂಗಿದೆ. ಅವನಿಗೂ ಗಾಬರಿಯಾಯ್ತೆಂದು ಕಾಣುತ್ತೆ. ಗಲಿಬಿಲಿಯಿಂದ ತಿರುಗಿ ನೋಡಿದ. ಹೆಗಲ ಮೇಲಿದ್ದ ಗೋಣಿಚೀಲವನ್ನು ಕೆಳಗಿಳಿಸಿ ಒಹೋಯ್‌ಟಿ ಎಂದ. ನಿಲ್ಲಿನಿಲ್ಲಿಟಿ ಎಂದವನೇ ಅವನೆಡೆಗೆ ವೇಗವಾಗಿ ನಡೆಯತೊಡಗಿದೆ. ಗುತ್ತಿಗಳನ್ನು ಸುತ್ತಿ ಬಳಸಿ ಹಾವಿನಂತೆ ಅವನೆಡೆಗೆ ಹೋಗುತ್ತಿದ್ದವನು ಕಾಲಿಗೇನೋ ತಾಡಿ ಹಾರಿ ನೆಗೆದುಬಿದ್ದೆ. ಎರಡು-ಮೂರಿಂಚು ಉದ್ದದ ಚೂರಿಯಂಥ ಈಚಲ ಮುಳ್ಳುಗಳ ಇರಿತದಿಂದ ನನ್ನ ಮುಖ ಪಾರಾದದ್ದೇ ಒಂದು ದೊಡ್ಡ ಪುಣ್ಯ. ಮಕಾಡೆಬಿದ್ದ ನನ್ನ ಮೇಲೆ ನನ್ನ ಬ್ಯಾಗು ಬಿದ್ದು ಎಡಗೈ ಈಚಲಗುತ್ತಿಯ ಬುಡದ ಮುಳ್ಳಿನ ಮೇಲೆ ಬಿದ್ದು ಒಂದು ಮುಳ್ಳು ಕಿರುಬೆರಳು ಮತ್ತದರ ಪಕ್ಕದ ಬೆರಳಿನ ಬುಡದ ನಡುವೆ ತೂರಿ ಮುರಿದೇಹೋಯ್ತು. ಅಸಾಧ್ಯ ನೋವಿನಿಂದ ಕಿರುಚುವಂತಾದ ನನ್ನ ಬಳಿಗೆ ಆ ವ್ಯಕ್ತಿ ಓಡಿ ಬಂದ. ಅಯ್ಯಯ್ಯೋ ಎಂಥಾ ಕೆಲಸ ಆಯ್ತು. ತುಂಬಾ ಏಟಾಯ್ತಾ ಏನ್ ಕಥೆ ಮಾರಾಯ್ರೆ. ಇಲ್ಲಿಗ್ಯಾಕೆ ಬಂದ್ರಿ? ಈಗ ನಾನೇ ಬಲೆಯೊಡ್ಡಿ ಹೋಗಿದ್ದೆ. ತೆಳೂತಂತಿ ಬೇರೆ; ಕಾಣೋದಿಲ್ಲ. ಸರಿ, ಈಚೆ ಬನ್ನಿ. ಅರೇ! ಕೈಗೆ ತುಂಬಾ ಪೆಟ್ಟಾಗಿರೋ ಹಾಗಿದೆ. ಸರ್ರಿಯಾದ ಮುಳ್ಳೇ ಚುಚ್ಚಿದೆ. ಇದ್ರುಮನೆ ಕಾಯಾಗ. ಹಂಗೇ ಹಿಡ್ಕಳಿ ನೋವಾಗುತ್ತೆ. ಹಾಗೆ ಇರಿಟಿ ಎಂದವನೇ ನನ್ನ ಎಡ ಅಂಗೈ ತೂರಿ ಹೋಗಿ ಮುರಿದಿದ್ದ ಮುಳ್ಳನ್ನು ತನ್ನ ಹಲ್ಲಿನಲ್ಲಿ ಕಚ್ಚಿ ಬಲವಾಗಿ ಎಳೆದ. ಮುಳ್ಳು ಹೊರಬಂದ ಕೂಡಲೇ ಆ ಜಾಗದಿಂದ ರಕ್ತ ಚಿಲ್ಲನೇ ಚಿಮ್ಮತೊಡಗಿತು. ಇಲ್ಲೇ ಇರಿ ಒಂದು ಸೊಪ್ಪಿದೆ ಔಷಧೀದು, ತರ್ತೀನಿ ರಕ್ತ ಬರೋದು ಸ್ವಲ್ಪ ಹೊತ್ತಿನಲ್ಲೇ ನಿಲ್ಲುತ್ತೆಟಿ ಅಂದು ಎತ್ತಲೋ ಹೋಗಲು ಕ್ರಮಿಸಿದ. ನಾನು ಬೇಡಬೇಡ ನನ್ನ ಬ್ಯಾಗಿನಲ್ಲೇ ಫಸ್ಟೆಡ್ ಬಾಕ್ಸ್ ಇದೆ. ಅದರಲ್ಲೇ ಟಿಂಚರ್, ಹತ್ತಿ, ಪ್ಲಾಸ್ಟರ್ ಇದೆ. ಸ್ವಲ್ಪ ತೆಗೆದು ಹಾಕಿಟಿ ಎಂದೆ. ನನ್ನ ಬ್ಯಾಗನ್ನು ನನ್ನ ಬೆನ್ನಿನಿಂದ ಬಿಡಿಸಿ ಝಿಪ್ ಎಳೆದು ಮೆಲ್ಲಗೆ ತೆಗೆದು ಔಷಧಿ ಹಾಕಿ ತನಗೆ ತಿಳಿದಂತೆ ಬ್ಯಾಂಡೇಜ್ ಹಾಕಿದ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248